(ಗೊಂದಲ)

ಶ್ರೀ ಪಿ.ಸಿ. ಸಿದ್ಧನಗೌಡ : ನಾನು ಬರೆದು ಕೇಳಿದ್ದೇನೆ. 38 ಕೋಟಿ ರೂಪಾಯಿಗಳ ಬಟ್ಟೆಯನ್ನು ಯಾವಾಗ ರಿಲೀಜ್ ಮಾಡುತ್ತೀರಿ, ಎನ್ನುವುದನ್ನು ಜವಳಿಖಾತೆಯ ಸಚಿವರನ್ನು ತಮ್ಮ ಮುಖಾಂತರ ಕೇಳುತ್ತೇನೆ. ಈ 38 ಕೋಟಿ ರೂಪಾಯಿಗಳ ಬಟ್ಟೆಯನ್ನು ದಾಸ್ತಾನು ಇಟ್ಟಿದ್ದೆಯೆಂದು ಹೇಳಿದರು. ಅದನ್ನು ಯಾವಾಗ ರಿಲೀಜ್ ಮಾಡುತ್ತೀರಿ ಅಥವಾ ಅದನ್ನು ಸಬ್ಸಿಡಿ ಮೇಲೆ ಬಟ್ಟೆ ಕೊಟ್ಟರೆ ನಡೆಯುತ್ತದೆ. ಇದು ಒಂದು ಕ್ಲಾರಿಫಿಕೇಷನ್ ಕೇಳಿದ್ದೇನೆ, ನಾನು ಡಿಟೈಲ್ ಆಗಿ ಹೋಗಿಲ್ಲ. ಈ ಎರಡು ಪಾಯಿಂಟ್ಗಳನ್ನು ಕೇಳಿದ್ದೇನೆ. ಈಗ 38 ಕೋಟಿ ರೂಪಾಯಿಗಳ ದಾಸ್ತಾನು ಏನು ಇಟ್ಟಿದ್ದಾರೆ ಅದನ್ನು ಅವರು ಯಾವಾಗ ರಿಲೀಜ್ ಮಾಡುತ್ತಾರೆ. ಅದನ್ನು ಸಬ್ಸಿಡಿ ಮೇಲೆ ಕೊಟ್ಟರೆ ಆ ಸಂಸ್ಥೆ ಬದುಕುತ್ತದೆ. ಎರಡನೆಯದು ಜವಳಿ ಸಚಿವರ ಕ್ಷೇತ್ರದಲ್ಲಿ ನೇಕಾರರಿಗೆ ಕೊಟ್ಟಂತಹ ನೂಲಿನ ಬಗ್ಗೆ ಅನೇಕ ಪತ್ರಿಕೆಗಳಲ್ಲಿ ಬಂದಿದ್ದು, ಅವರು ಧರಣಿಗೆ ಕುಳಿತಿದ್ದರೂ ಅವರಿಗೆ ಪೇಮೆಂಟ್ ಬಂದಿಲ್ಲ. ಈ ಎರಡರ ಬಗ್ಗೆ ಸಚಿವರು ಹೇಳಬೇಕು. ಈ 38 ಕೋಟಿ ರೂಪಾಯಿಗಳ ದಾಸ್ತಾನನ್ನು ಬಿಡುಗಡೆ ಮಾಡುವುದಕ್ಕೆ ತಾವು ಯಾವಾಗ ತೀರ್ಮಾನ ತೆಗೆದುಕೊಳ್ಳುತ್ತೀರಿ. ಸಬ್ಸಿಡಿ ಮೇಲೆ ಅಥವಾ ಬೇರೆ ಯಾವುದೇ ರೂಪದಲ್ಲಿ ಆ ಬಟ್ಟೆ ಮಾರಾಟ ಲಾಸ್ ಆಗುವುದಿಲ್ಲ. ನೀವು ಲೇಟ್ ಮಾಡಿದರೆ ಲಾಸ್ ಆಗುತ್ತದೆ.

ಶ್ರೀ ಹೆಚ್.ಕೆ. ಪಾಟೀಲ್ : ಸನ್ಮಾನ್ಯ ಸಿದ್ಧನಗೌಡರು ನಾನು ಹೇಳಿದ್ದನ್ನು ಕೇಳಿಸಿ ಕೊಳ್ಳಲಿಲ್ಲ ಎಂದು ಕಾಣಿಸುತ್ತದೆ. ಈ ಕಾರ್ಪೊರೇಷನ್ಗಳು ವ್ಯವಹಾರಕ್ಕಾಗಿ ಬಿಸಿನೆಸ್ ಆರ್ಗನೈಜೇಷನ್ ನಡೆದ ಹಾಗೆ ನಡೆದರೆ ಈ ಸಮಸ್ಯೆ ಬರುವುದಿಲ್ಲ. ಇವತ್ತು 38 ಕೋಟಿ ರೂಪಾಯಿ ಸರ್ಕಾರದ ನಿಗಮದಲ್ಲಿ ಇಟ್ಟುಕೊಂಡು ಕುಳಿತರೆ ಅದು ನಮ್ಮ ಕಾರ್ಪೊರೇಷನ್ ದಕ್ಷತೆಯನ್ನು ತೋರಿಸುತ್ತದೆ. ಇದು ತೀವ್ರವಾಗಿ ಕಡಿಮೆ ಆಗಬೇಕು. ಬಹಳ ಅಂದರೆ 5 ಕೋಟಿ ಇರಬಹುದು. 10 ಕೋಟಿ ರೂಪಾಯಿಗಳವರೆಗೆ ನಾವು ಮಾರ್ಜಿನ್ ಕೊಡಬಹುದು. ಅದಕ್ಕೆ ಈರೋಡ್ನಂಥ ಸಂತೆಯೊಳಗೆ ಸಹಿತ ಹೋಗಿ ಮಾರಬೇಕೆಂದು ಆದೇಶ ನೀಡಿದ್ದೇವೆ. ನಿಮಗೆ ಗೊತ್ತಿರುವ ಹಾಗೆ, ಜನತಾ ಬಟ್ಟೆಯನ್ನು ನಾವು ಟಿ.ಎ.ಪಿ.ಸಿ.ಎಂ.ಎಸ್. ಮತ್ತು ರೇಷನ್ಶಾಪ್ಗಳ ಮೂಲಕ ಮಾರಾಟ ಮಾಡುತ್ತೇವೆ. ಜನತಾ ಬಟ್ಟೆ ಅಷ್ಟು ಸರಿಯಾಗಿದ್ದರೂ ಸಹಿತ ಟಿ.ಎ.ಪಿ.ಸಿ.ಎಂ.ಎಸ್. ಇವತ್ತು ಸ್ಟಾಗ್ನೇಟ್ ಆಗಿರುವುದರಿಂದ ಅಲ್ಲೂ ಸಹಿತ ಹೋಲ್ಸೇಲ್ ಪಾಯಿಂಟ್ ಒಳಗೆ ಟೇಕ್ ಆಫ್ ಮಾಡುತ್ತಿಲ್ಲ, ರೇಷನ್ ಶಾಪ್ಗೆ ಮುಟ್ಟುತ್ತಿಲ್ಲ. ಇದೆಲ್ಲಾ ಆಂತರಿಕ ತೊಂದರೆಗಳಿರುವುದರಿಂದ ಈ ಒಂದು ಸಂಗ್ರಹ ಸಹಿತ ಜಾಸ್ತಿಯಾಗಿದೆ. ಈ ಸಂಗ್ರಹವನ್ನು ಕನಿಷ್ಟಗೊಳಿಸಿದಾಗ ಮಾತ್ರ ನಿಗಮದ ಆರೋಗ್ಯ ಸರಿಯಾಗುತ್ತದೆ. ಈ ದಿಶೆಯಲ್ಲಿ ಸೂಕ್ತವಾದಂತಹ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಪರಿವಾರ ಜನಾಂಗದವರನ್ನು ಪರಿಶಿಷ್ಟ ವರ್ಗಕ್ಕೆ ಸೇರಿಸುವುದರ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ಪರಿಹಾರ ಜನಾಂಗದವರನ್ನು ಪರಿಶಿಷ್ಟ ವರ್ಗಕ್ಕೆ ಸೇರಿಸುವ ಬಗ್ಗೆ ಮಾನ್ಯ ಸಮಾಜ ಕಲ್ಯಾಣ ಮತ್ತು ಕಂದಾಯ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಮತ್ತು ಕಂದಾಯ ಮಂತ್ರಿಗಳು): ಮಾನ್ಯ ಅಧ್ಯಕ್ಷರೇ, ಈ ಸದನದ ಹಿರಿಯ ಸದಸ್ಯರಾದ ವಾಟಾಳ್ ನಾಗರಾಜ್ರವರು ಮೈಸೂರು ಜಿಲ್ಲೆಯಲ್ಲಿರತಕ್ಕ ಪರಿವಾರ ಜನಾಂಗದ ಬಗ್ಗೆ ಬಹಳಷ್ಟು ಸಾರಿ ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಮಾರ್ಚಿ 18ನೇ ತಾರೀಖು ನಾನು ಅವರಿಗೆ ಉತ್ತರವನ್ನೂ

ಕೂಡ ಕೊಟ್ಟಿದ್ದೇನೆ. ಈಗ ಯಾವುದಾದರೂ ಜಾತಿಯನ್ನು ಪರಿಶಿಷ್ಟ ಜಾತಿಗೆ ಸೇರಿಸಬೇಕಾದರೆ ಅದು ಕೇಂದ್ರ ಸರ್ಕಾರದ ಪಟ್ಟಿಯಾಗಿರುತ್ತದೆ. ಕೇಂದ್ರ ಸರ್ಕಾರದ ಪಟ್ಟಿಯಾಗಿದ್ದರೆ ಅಲ್ಲಿ ಅದು ತಿದ್ದುಪಡಿಯಾಗಬೇಕಾಗುತ್ತದೆ. ಕಳೆದ ಸಾರಿ ನಾನು ಈ ಸದನದಲ್ಲಿ ಏನು ಆಶ್ವಾಸನೆಯನ್ನು ಕೊಟ್ಟಿದ್ದೇನೆ, ಅದನ್ನು ನಾನು ಓದುತ್ತಿಲ್ಲ, ತಾವು ಓದಬೇಕೆಂದು ಹೇಳಿದರೆ ಓದುತ್ತೇನೆ. ಕಳೆದ ಸಾರಿ ಕೂಡ ನಾನು ಉತ್ತರ ಕೊಟ್ಟಿದ್ದೇನೆ. ಮೈಸೂರು ಜಿಲ್ಲೆಯಲ್ಲಿ ನಾಯಕ, ಪರವಾರ ಎಂಬ ಪರ್ಯಾಯ ಶಬ್ದಗಳ ಅರ್ಥ ಒಂದೇ. ಒಂದು ಮನೆಯಲ್ಲಿ ನಾಯಕರಿಗೆ ಸೌಲಭ್ಯಗಳು ಸಿಕ್ಕುತ್ತಿವೆ. ಪರಿವಾರ ಜನರಿಗೆ ಸೌಲಭ್ಯ ಸಿಕ್ಕುತ್ತಿಲ್ಲ. ಇದನ್ನು ನಾವು ಒಪ್ಪಿದ್ದೇವೆ. ನಾವು ಒಪ್ಪಿದ್ದರೂ ಕೂಡ ಇದು ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟ ವಿಷಯವಾದ ಕಾರಣ ಇದು ಎಲ್ಲಿಯವರೆಗೆ ತಿದ್ದುಪಡಿಯಾಗುವುದಿಲ್ಲ ಅದುವರೆಗೂ ಆ ಪಟ್ಟಿಯಲ್ಲಿ ಇದನ್ನು ಸೇರಿಸುವುದಕ್ಕಾಗುವುದಿಲ್ಲ. ನಾನು ಕಳೆದ ಸಾರಿ ಕೂಡ ಆಶ್ವಾಸನೆ ಕೊಟ್ಟಿದ್ದೇನೆ. ನಮ್ಮ ಸಚಿವ ಸಂಪುಟದಲ್ಲಿ ಇದರ ಬಗ್ಗೆ ತೀರ್ಮಾನ ತೆಗೆದುಕೊಂಡು ಕೇಂದ್ರ ಸರ್ಕಾರಕ್ಕೆ ನಮ್ಮ ಸಂಪುಟದ ತೀರ್ಮಾನವನ್ನು ಕಳುಹಿಸಿ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕೆಂದು ಹೇಳಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳೂ ಕೂಡ ಕೇಂದ್ರ ಸರ್ಕಾರಕ್ಕೆ ಪತ್ರವನ್ನು ಬರೆದಿದ್ದಾರೆ. ಮತ್ತು ಇದಕ್ಕೆ ಸಂಬಂಧಪಟ್ಟ ಕಲ್ಯಾಣ ಖಾತೆ ಮಂತ್ರಿಗಳಾದ ಮಾನ್ಯ ಸೀತಾರಾಮ ಕೇಸರಿಯವರೂ ಕೂಡ ನಮಗೆ ಒಂದು ಪತ್ರವನ್ನು ಬರೆದಿದ್ದಾರೆ. ಅವರು ಬರೆದ 11ನೇ ಅಕ್ಟೋಬರ್ 93ರ ಪತ್ರ ಇಲ್ಲಿದೆ. ಆ ಪತ್ರದಲ್ಲಿ ಏನು ಹೇಳಿದ್ದಾರೆಂದರೆ, ತಾವು ನಮಗೆ ಪತ್ರವನ್ನು ಬರೆದು ತಿಳಿಸಿದ್ದೀರಿ. ನಾಯಕ, ಪರಿವಾರ ಜನಾಂಗ ಒಂದೇ ಇದನ್ನು ಟ್ರೈಬ್ಸ್ ಲಿಸ್ಟ್‌ನಲ್ಲಿ ಸೇರಿಸಬೇಕೆಂದು ಹೇಳಿದ್ದೀರಿ. ಎಂದು ಹೇಳುತ್ತಾ ಮುಂದೆ ಹೀಗೆ ಬರೆದಿದ್ದಾರೆ :

Please refer to your dated 30th August 93 regarding declaration of parivara and synonmous tribe community in the State. The said proposals, suggestion and opinion etc., are being considered in the context of proposed comprehensive revision of the list of Scheduled Caste and Scheduled Tribes. Further any amendment in the existing list can only be made through on Act of Parliament under Article 341 and 342 of the Constitution.

ಇದರ ಬಗ್ಗೆ ನಾವು ಖುದ್ದಾಗಿ ಕೂಡ ಅವರ ಜೊತೆ ಮಾತನಾಡಿದ್ದೇವೆ. ಮಾನ್ಯ ಮುಖ್ಯ ಮಂತ್ರಿಗಳು ಬರುವ 18ನೇ ತಾರೀಖು ದೆಹಲಿಗೆ ಹೋಗುತ್ತಿದ್ದಾರೆ. ಅವರು ರಾಜ್ಯಸಭೆ ಚುನಾವಣೆಗೆ ಸಂಬಂಧಪಟ್ಟಂತೆ ಕರ್ತವ್ಯದಲ್ಲಿ ಮಗ್ನರಾಗಿದ್ದಾರೆ. ನಾನು ತಮಗೆ ಆಶ್ವಾಸನೆ ಕೊಡುತ್ತಿದ್ದೇನೆ. ನಾನು ಏತಕ್ಕೆ ಇದನ್ನು ಪ್ರಸ್ತಾಪ ಮಾಡುತ್ತಿದ್ದೇನೆಂದರೆ ಪದೇ ಪದೇ ಇದನ್ನು ಕೇಳುತ್ತಿರುವುದಕ್ಕೆ ವಸ್ತುತಃ ಅಲ್ಲಿನ ಜನರಲ್ಲಿ ಈ ಒಂದು ಗಂಭೀರವಾದ ಸಮಸ್ಯೆ ಇದೆ. ನಾವು ಇದರ ಬಗ್ಗೆ ಆಶ್ವಾಸನೆ ಕೊಟ್ಟು ಅಷ್ಟಕ್ಕೇ ನಾವು ಸುಮ್ಮನೆ ಕುಳಿತಿಲ್ಲ. ಪತ್ರವನ್ನೂ ಬರೆದಿದ್ದೇವೆ, ಅದಕ್ಕೆ ಉತ್ತರ ಕೂಡ ಬಂದಿದೆ. ಅದು ರಾಜ್ಯಾಂಗದಲ್ಲಿ ತಿದ್ದುಪಡಿ ಆಗಲೇಬೇಕು. ಈ ಸಾರಿ ಪಾರ್ಲಿಮೆಂಟ್ ಅಧಿವೇಶನದಲ್ಲಿ ಇದನ್ನು ಮಾಡಿಸಿಯೇ ಕೊಡುತ್ತೇವೆ. ಇದು ನನ್ನ ಕರ್ತವ್ಯ. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಯವರೂ ಹೇಳುತ್ತಾರೆ. ನಾನೂ ಕೂಡ ಹೋಗಿ ಕೇಂದ್ರದ ಲಿಸ್ಟ್‌ನಲ್ಲಿ ನಾಯಕ ಮತ್ತು ಪರಿವಾರ ಜನಾಂಗವನ್ನು ಸೇರಿಸುವ ಪ್ರಯತ್ನ ಮಾಡುತ್ತೇನೆಂಬ ಮಾತನ್ನೂ ಕೂಡ ಈ ಸದನದಲ್ಲಿ ಹೇಳಬಯಸುತ್ತೇನೆ. ನಾವು ಪತ್ರ ಬರೆದು ಸುಮ್ಮನೆ ಕೂರದೆ ಸಚಿವ ಸಂಪುಟದಲ್ಲಿ ಒಂದು ನಿರ್ಣಯ ಪಾಸ್ ಮಾಡಿ ಅದನ್ನೂ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ.

ಇಷ್ಟು ಕೆಲಸ ಈ ದಿಸೆಯಲ್ಲಿ ಆಗಿದ್ದು ಈ ಕೆಲಸ ಆದೇ ಆಗುತ್ತದೆಂಬ ಆಶ್ವಾಸನೆಯನ್ನು ಮಾನ್ಯ ಅಧ್ಯಕ್ಷರ ಮುಖಾಂತರ ತಮಗೆ ಕೊಡಬಯಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ಮಾನ್ಯ ಸಚಿವರನ್ನು ಅಭಿನಂದಿಸುತ್ತೇನೆ. ಕಾರಣ ಅವರಿಗೆ ಈ ಬಗ್ಗೆ ಬಹಳ ಕಳಕಳಿ ಮತ್ತು ಕಾಳಜಿ ಇದೆ. ನಾಯಕ, ಪರಿವಾರ ಜನಾಂಗವನ್ನು ಪರಿಶಿಷ್ಟ ವರ್ಗಕ್ಕೆ ಸೇರಿಸುವಂತೆ ಅನೇಕ ಸಾರಿ ಒತ್ತಾಯಮಾಡಿ ಅವರಿಗೆ ಮನವಿಗಳನ್ನು ಸಲ್ಲಿಸಿದ್ದೇನೆ. ಮೈಸೂರು ಜಿಲ್ಲೆ ಒಂದರಲ್ಲೇ ಕನಿಷ್ಟ 5 ಲಕ್ಷ ಜನ ನಾಯಕ ಜನ ಇದ್ದಾರೆ. ಪರಿವಾರ ಎಂಬುದು ಪರ್ಯಾಯ ಪದ. ಈ ನಾಯಕ ಜನಾಂಗವನ್ನು ಪರಿಶಿಷ್ಟ ವರ್ಗಕ್ಕೆ ಸೇರಿಸಬೇಕೆಂದು ಆಜ್ಞೆಯನ್ನು ಹೊರಡಿಸಿದ್ದಾರೆ. ಈಗ ಲೋಕಸಭೆ ಸೇರುತ್ತಿದೆ. ಇದಕ್ಕಿಂತ ಮುಂಚೆ ತಾವು ಮಾತನಾಡಿ ಒಂದು ಸುಗ್ರೀವಾಜ್ಞೆಯನ್ನು ಹೊರಡಿಸಬಹುದು. ಏಕೆಂದರೆ ಇದನ್ನು ತಾವೂ ಒಪ್ಪಿದ್ದೀರಿ, ಮತ್ತು ಕೇಂದ್ರದ ಸಚಿವರಾದ ಮಾನ್ಯ ಸೀತಾರಾಮ ಕೇಸರಿಯವರೂ ಒಪ್ಪಿದ್ದಾರೆ, ಅಂದಮೇಲೆ ಇದು ಯಾವುದೇ ಗೊಂದಲಕ್ಕೆ ಕಾರಣವಿಲ್ಲ. ಮುಂದಿನವಾರ ತಾವು ದೆಹಲಿಗೆ ಹೇಗೂ ಹೋಗುತ್ತಿದ್ದೀರಿ. ಆಗ ಅವರನ್ನು ವೈಯುಕ್ತಿಕವಾಗಿ ಭೇಟಿ ಮಾಡಿ. ಇದು ಪಾರ್ಲಿಮೆಂಟ್ನಲ್ಲಿ ಚರ್ಚೆ ಬರುವುದು ಬರಲಿ. ಅಲ್ಲಿ ಬೇಕಾದರೆ ಈ ಮಸೂದೆಗೆ ತಿದ್ದುಪಡಿ ಬರಲಿ. ಅದಕ್ಕೆ ಮುಂಚೆ ಒಂದು ಸುಗ್ರೀವಾಜ್ಞೆಯನ್ನು ಹೊರಡಿಸಿ. ಇದನ್ನು ಎಲ್ಲರೂ ಒಪ್ಪಿದ್ದಾರೆ. ಯಾರೂ ಇದನ್ನು ಅಲ್ಲಗಳೆದಿಲ್ಲ. ಮತ್ತು ಕರ್ನಾಟಕ ಸರ್ಕಾರ ಇದರ ಬಗ್ಗೆ ಮುಕ್ತ ಮನಸ್ಸಿನಿಂದಿದೆ. ತಾವು ಪತ್ರ ಬರೆದಿದ್ದೀರಿ. ಸಚಿವಸಂಪುಟದ ತೀರ್ಮಾನವಾಗಿದೆ. ಆದ್ದರಿಂದ ಇವತ್ತು ಆ ಜನಾಂಗವನ್ನು ಕತ್ತಲೆಯಲ್ಲಿಡುವುದು ಬೇಡ. ಅವರು ಕಗ್ಗತ್ತಲೆಯಲ್ಲಿದ್ದಾರೆ. ಅವರ ಭವಿಷ್ಯದ ಬಗ್ಗೆ ನಾವು ಚಿಂತನೆ ಮಾಡಬೇಕು. ಇದು ನಿಮ್ಮಿಂದಲೇ ಸಾಧ್ಯ. ಆ ಕೀರ್ತಿ ನಿಮಗೇ ಸಿಕ್ಕಲಿ. ನೀವು ಇದರ ಬಗ್ಗೆ ಹಠ ಮಾಡಿ, ಇದು ನಿಮ್ಮ ಸ್ವಂತ ಕೆಲಸಕ್ಕಿಂತ ಹೆಚ್ಚು ಎಂದು ಕಾಳಜಿ ವಹಿಸಿ ಲೋಕಸಭೆಯಲ್ಲಿ ತಿದ್ದುಪಡಿ ಬರುವುದಕ್ಕೆ ಮುಂಚೆಯೇ ಒಂದು ಸುಗ್ರೀವಾಜ್ಞೆಯನ್ನು ಹೊರಡಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಎರಡನೆಯದಾಗಿ, ಶಾಲಾ ಸರ್ಟಿಫಿಕೇಟ್ಗಳನ್ನು ತೆಗೆದುಕೊಂಡು ಅದರಲ್ಲಿ ಯಾರ್ಯಾರು ನಾಯಕ ಎಂದು ಇದ್ದಾರೆ ಅವರಿಗೆ ಈ ಪರಿಶಿಷ್ಟ ಜಾತಿ ಎಂದು ಸರ್ಟಿಫಿಕೇಟ್ನು ಕೊಡಬೇಕೆಂದು ತಾವು ಈಗಾಗಲೇ ಹೇಳಿದ್ದೀರಿ. ಯಾರಿಗೆ ಶಾಲಾ ಸರ್ಟಿಫಿಕೇಟ್ ಇಲ್ಲ ಅಂಥವರ ಬಗ್ಗೆ ಕಂದಾಯ ಕಡತಗಳನ್ನು ನೋಡುವುದು ಅಥವಾ ಬೇರೆ ವಿಧಾನಗಳಿಂದ ಪತ್ತೆ ಹಚ್ಚಿ ಅವರಿಗೆ ಸರ್ಟಿಫಿಕೇಟ್ ಕೊಡಬೇಕು. ಏಕೆಂದರೆ ಇವತ್ತು ಮೈಸೂರು ಜಿಲ್ಲೆಯಲ್ಲಿ ಕೆಲವು ತಹಸಿಲ್ದಾರ್ರವರು ನಾಯಕ ಎಂಬ ಪದಕ್ಕೂ ಕೂಡ ಸರ್ಟಿಫಿಕೇಟ್ ಕೊಡತಕ್ಕದ್ದು ಕಷ್ಟವಾಗಿದೆ. ಅವರು ಈಗ ಏನು ಹೇಳುತ್ತಿದ್ದಾರೆಂದರೆ, 1981ನೇ ಇಸವಿಗಿಂತ ಹಿಂದೆ ಇರತಕ್ಕ ಶಾಲಾ ದಾಖಲೆಗಳಲ್ಲಿ ನಾಯಕ ಎಂದು ಇದ್ದರೆ ನಾವು ಕೊಡುತ್ತೇವೆ, ಅನಂತರ ಇದ್ದರೆ ನಾವು ಕೊಡುವುದಿಲ್ಲವೆಂದು ಹೇಳುತ್ತಿದ್ದಾರೆ. ಆದ್ದರಿಂದ 1981ರಿಂದ ಹಿಂದೆ ಅಥವಾ ಅನಂತರ ಯಾರಿಗೆ ಶಾಲಾ ಸರ್ಟಿಫಿಕೇಟ್ಗಳಲ್ಲಿ ನಾಯಕ ಎಂದು ಇರದೆ, ಶಾಲಾ ಸರ್ಟಿಫಿಕೇಟ್ ಇರತಕ್ಕವರಿಗೆ ನಾಯಕ ಎಂದು ಕೊಟ್ಟೇ ಕೊಡಬೇಕು. ಆ ಸರ್ಟಿಫಿಕೇಟ್ ಇಲ್ಲದವರಿಗೆ ಕಂದಾಯದ ಕಡತಗಳನ್ನು ನೋಡಿ ಕೊಡಬೇಕು ಎಂಬ ಸ್ಪಷ್ಟ ಆದೇಶ ನೀಡಬೇಕು. ಯಾವ ತಹಸೀಲ್ದಾರರು ಈ ರೀತಿಯ ಸರ್ಟಿಫಿಕೇಟ್ನ್ನು ಕೊಡುವುದಿಲ್ಲವೆಂದು ಹೇಳುತ್ತಾರೆ ಅವರ ವಿರುದ್ಧ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರೆಂಬುದನ್ನು ದಯವಿಟ್ಟು ಹೇಳಬೇಕು.

ಶ್ರೀ ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೆ, ನಾನು ಒಂದು ಹೆಜ್ಜೆ ಮುಂದೆ ಹೋಗಿ ಹೇಳುವುದಾದರೆ, ಸಮಾಜ ಕಲ್ಯಾಣ ಖಾತೆಯ ಸಚಿವರಾದ ಮಾನ್ಯ

ಸೀತಾರಾಮ ಕೇಸರಿಯವರು ಕಲ್ಯಾಣ ಖಾತೆಯ ಸೆಕ್ರೆಟರಿಯವರಾದ ಮೋಜಸ್ ಎನ್ನುವವರ ಅಧ್ಯಕ್ಷತೆಯಲ್ಲಿ ಇಂಥ ಪರ್ಯಾಯ ಶಬ್ದಗಳು ಇದ್ದು ಅವುಗಳಿಗೆ ತಿದ್ದುಪಡಿಯನ್ನು ತರಬೇಕೆಂದು ತಿಳಿಸುವ ಸಲುವಾಗಿ ಒಂದು ಸಮಿತಿಯನ್ನೂ ಕೂಡ ನೇಮಿಸಿದ್ದಾರೆ. ಆ ಸಮಿತಿಯವರೂ ಕೂಡ ತಿದ್ದುಪಡಿಯನ್ನು ತರುವುದಕ್ಕೆ ವ್ಯವಸ್ಥೆ ಮಾಡುತ್ತಿದ್ದಾರೆ.

ಇನ್ನು ಮೈಸೂರು ಜಿಲ್ಲೆಯಲ್ಲಿ ನಾಯಕ ಎಂದು ಇದ್ದರೂ ಕೂಡ ಅವರಿಗೆ ಸರ್ಟಿಫಿಕೇಟ್ಗಳನ್ನು ತಹಸೀಲ್ದಾರರು ಕೊಡುತ್ತಿಲ್ಲವೆಂದು ಮಾನ್ಯ ವಾಟಾಳ್ ನಾಗರಾಜ್ರವರೂ, ಇನ್ನೂ ಕೆಲವು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಮೈಸೂರಿಗೆ ನಾನು ಇತ್ತೀಚೆಗೆ ಬಂದಾಗಲೂ ಕೂಡ ಹೇಳಿದ್ದೀರಿ. 1981ರ ಸರ್ಕ್ಯುಲರನ್ನು ಹೊರತುಪಡಿಸಿ ಮತ್ತೊಂದು ಕಟ್ಟುನಿಟ್ಟಾದ ಆದೇಶವನ್ನು ನಮ್ಮ ಸರ್ಕಾರ ಹೊರಡಿಸಿದೆ. ಮೊನ್ನೆ ಮೈಸೂರು ಜಿಲ್ಲಾಧಿಕಾರಿಗಳು ಬಂದಿದ್ದಾಗ ತಮ್ಮನ್ನೂ ಕೂಡ ಭೇಟಿ ಮಾಡಿದ್ದಾರೆ. ಶಾಲಾ ಸರ್ಟಿಫಿಕೇಟ್ಗಳಲ್ಲಿ, ರೆವಿನ್ಯೂ ದಾಖಲಾತಿಗಳಲ್ಲಿ ಈ ಹೆಸರು ಇಲ್ಲದಿದ್ದರೂ ಕೂಡ ರೆವಿನ್ಯೂ ಇಲಾಖೆಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ 3 ದಿನದಲ್ಲಿ ಕೊಡಬೇಕೆಂದು ಆದೇಶವನ್ನು ಕೊಟ್ಟಿದ್ದೇವೆ. ಈಗಾಗಲೇ ಜಿಲ್ಲಾಧಿಕಾರಿಯವರಿಗೆ ಸ್ಪಷ್ಟವಾದ ಆದೇಶವನ್ನು ಕೊಟ್ಟಿದ್ದೇವೆ. ಎಲ್ಲಾದರೂ ಯಾವುದೇ ತಹಸೀಲ್ದಾರರು ಈ ಸರ್ಟಿಫಿಕೇಟನ್ನು ಕೊಡದೇ ನಿರಾಕರಿಸಿದರೆ ಅವರ ವಿರುದ್ಧ ಕ್ರಮ ತೆಗೆದುಕೊಳ್ಳುತ್ತೇವೆ.

ನಿಯಮ 334ರ ಮೇರೆಗೆ

1993-94ನೇ ಸಾಲಿಗೆ ಪರಿಶಿಷ್ಟ ಜಾತಿ ಮತ್ತು ವರ್ಗದ ಅಭಿವೃದ್ಧಿ ಯೋಜನೆಗೆ ವಿಶೇಷ ಘಟಕ ಯೋಜನೆಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರ ಮೀಸಲಿಟ್ಟಿರುವ ಹಣ

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಅಧ್ಯಕ್ಷರೆ, 1993-94ನೇ ಸಾಲಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನರ ಅಭಿವೃದ್ಧಿ ಯೋಜನೆಗೆ ವಿಶೇಷ ಘಟಕ ಯೋಜನೆಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರ ಮೀಸಲಿಟ್ಟಿರುವ ಹಣವೆಷ್ಟು? ಮತ್ತು 1994ರ ಜನವರಿ ಕೊನೆಯವರೆಗೆ ಖರ್ಚು ಮಾಡಿರುವ ಹಣವೆಷ್ಟು? ಈ ಬಗ್ಗೆ ವಿವರವನ್ನು ಒದಗಿಸಲು ವಿನಂತಿಸುತ್ತೇನೆ.

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಮತ್ತು ಕಂದಾಯ ಮಂತ್ರಿಯವರು) : ಮಾನ್ಯ ಅಧ್ಯಕ್ಷರೆ,

1993-94ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗಗಳ ಅಭಿವೃದ್ಧಿ ಯೋಜನೆಗಳಿಗಾಗಿ ವಿಶೇಷ ಘಟಕ ಮತ್ತು ಗಿರಿಜನ ಉಪ ಯೋಜನೆಗಳಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಮೀಸಲಿಟ್ಟಿರುವ ಮತ್ತು ಒದಗಿಸಿದ ಹಣದ ವಿವರಗಳು ಈ ಕೆಳಗಿನಂತಿದೆ :

ರಾಜ್ಯ ಯೋಜನೆ :

1)	ವಿಶೇಷ ಘಟಕ ಯೋಜನೆ	ರೂ. 280.69 ಕೋಟಿಗಳು
2)	ಗಿರಿಜನ ಉಪ ಯೋಜನೆ	ರೂ. 37.30 ಕೋಟಿಗಳು

ವಿಶೇಷ ಕೇಂದ್ರಿಯ ನೆರವು :

(ಭಾರತ ಸರ್ಕಾರದಿಂದ ಇಲ್ಲಿಯವರೆಗೆ ಬಿಡುಗಡೆಯಾದ ಹಣ)

1)	ವಿಶೇಷ ಘಟಕ ಯೋಜನೆ	ರೂ. 9.36 ಕೋಟಿಗಳು
2)	ಗಿರಿಜನ ಉಪ ಯೋಜನೆ	ರೂ. 1.28 ಕೋಟಿಗಳು